ವಾಟರ್ ನ್ಯಾಷನಲ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಚರ್ಚೆ ಮಾಡಿದ್ದಾರೆ. ಅದಾದ ನಂತರ 27.7.97ರಲ್ಲಿ ಜೆ.ಹೆಚ. ಪಟೇಲರು ಕೇಂದ್ರ ಸರ್ಕಾರಕ್ಕೆ ಕಾಗದ ಬರೆದು ನ್ಯಾಷನಲ್ ವಾಟರ್ ಪಾಲಿಸಿ ಆಗಬೇಕೆಂದು ಒತ್ತಾಯ ಮಾಡಿದ್ದಾರೆ. ಪುನಃ ಮುಖ್ಯ ಕಾರ್ಯದರ್ಶಿಯವರು ಜೂನ್ 2ರಲ್ಲಿ ಕಾಗದ ಬರೆದು ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಆಗಬೇಕೆಂದು ಹೇಳಿದ್ದಾರೆ. ತದನಂತರ 10 ಮತ್ತು 11ರ ಎರಡು ಲೆಟರುಗಳಲ್ಲಿಯೂ ಕೂಡ ನಾವು ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಬಗ್ಗೆ ಕೇಳಿದ್ದೇವೆ. ನ್ಯಾಷನಲ್ ವಾಟರ್ ಪಾಲಿಸಿಗೆ ಗೈಡ್‌ಲೈನ್ ಮಾಡಿ ಎಂದು ರಾಜ್ಯ ಸರ್ಕಾರ ತೀವ್ರವಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿದೆ. ಆದರಲ್ಲಿ ಯಾವುದೇ ಎರಡನೇ ಮಾತಿಲ್ಲ. ಇವತ್ತಿನ ದಿವಸ ಒಟ್ಟಾರೆ ಹೇಳುವುದಾದರೆ, ರಾಜ್ಯ ಸರ್ಕಾರ, ಕೇಂದ್ರದವರು ಕಳುಹಿಸಿರತಕ್ಕಂಥ ಈ ಡ್ರಾಫ್ಟ್ ನೋಟಿಫಿಕೋಷನ್ ಅಕ್ಸೆಪ್ಟ್ ಮಾಡಿಕೊಂಡಿಲ್ಲ. ಕೇಂದ್ರ ಸರ್ಕಾರದವರು ಮತ್ತೊಂದು ಸಾರಿ ನಮ್ಮನ್ನು ಮಾತುಕತೆಗೆ ಕರೆಯುತ್ತಾರೆದು ಹೇಳಿದ್ದಾರೆ. ಅವರ ಮಾತಿನಂತೆ, ನಾವು ಮಾತುಕತೆಗಾಗಿ ಕಾಯುತ್ತಿದ್ದೇವೆ. ಅವರು ಕರೆದ ನಂತರ, ನಮ್ಮ ವಿಚಾರವನ್ನು ಸ್ಪಷ್ಟವಾಗಿ, ಈ ಕರಡು ನೀತಿಯಿಂದ ರಾಜ್ಯದ ಹಿತಕ್ಕೆ ಧಕ್ಕೆ ಬಂದಿದೆ ಎನ್ನತಕ್ಕಂಥ ವಿಚಾರವನ್ನು ಹೇಳುವುದಕ್ಕೆ ರಾಜ್ಯ ಸರ್ಕಾರ ಬದ್ಧವಾಗಿದೆ ಎಂಬುದನ್ನು ತಮ್ಮ ಮುಖಾಂತರ ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಸಭಾಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ಪುತ್ತೂರಿನಲ್ಲಿ ಖೋಟಾ ನೋಟು ಪ್ರಕರಣದ ಪತ್ತೆ.

+ ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, 10.7.97ರಂದು ಪುತ್ತೂರಿನಲ್ಲಿ ಒಂದು ಖೋಟಾ ನೋಟು ಪ್ರಕರಣ ಪತ್ತೆಯಾಗಿದೆ. ಸುಮಾರು ಸಾವಿರಗಟ್ಟಲೆ ಮೊತ್ತದ್ದ ಹಣವನ್ನು ಪೋಲೀಸಿನವರು ಈಗಾಗಲೇ ಸೀಜ್ ಮಾಡಿದ್ದಾರೆ. ಕ್ರೈಂ ನಂ.105:97ರಲ್ಲಿ ಈ ಒಂದು ಕೇಸನ್ನು ಕೂಡ ದಾಖಲೆ ಮಾಡಿದ್ದಾರೆ. ಆದ್ದರಿಂದ ಭಾರಿ ಸ್ಟ್ರೇಂಜ್ ಸಂಗತಿಗಳೇನೆಂದರೆ, ಯಾರು ಇದರಲ್ಲಿ ಪ್ರಮುಖ ಆರೋಪಿಗಳೆನಿಸಿಕೊಂಡಿದ್ದಾರೆ, ಅವರು ಸ್ವಲ್ಪ ರಾಜಕೀಯ ವಲಯದಲ್ಲಿ ಸೇರಿದಂಥ ವ್ಯಕ್ತಿಗಳೂ ಕೂಡ ಇದರಲ್ಲಿ ಶಾಮೀಲಾಗಿದ್ದಾರೆಂದು ಅಲ್ಲಿಯ ಲೋಕಲ್ ಪತ್ರಿಕೆಗಳಲ್ಲಿ ಬಂದಿದೆ. ಅದಲ್ಲದೆ, ಇದರ ಪ್ರಮುಖ ಆರೋಪಿ, ಪೋಲೀಸರ ಸಮಕ್ಷಮದಲ್ಲಿ ತಪ್ಪಿಸಿಕೊಂಡು ಓಡಿ ಹೋಗಿದ್ದಾನೆ ಎಂಬುದನ್ನು ಕೂಡ ಅವರ ಎಫ್‌ಐ ಆರ್‌ನಲ್ಲಿ ತೋರಿಸಿಕೊಟ್ಟು, ಬಾಕಿ ಇಬ್ಬರನ್ನು ಮಾತ್ರ ದಸ್ತಗಿರಿ ಮಾಡಿದ್ದಾರೆ. ಆದರೆ, ಮುಂದೆ ಕಳೆದ ಹಲವಾರು ದಿನಗಳಿಂದ ಇದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಇದು ಕೇವಲ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿಲ್ಲ. ಇದು ಅಂತರ್ ರಾಜ್ಯದ ಒಂದು ದೊಡ್ಡ ಖೋಟಾ ನೋಟಿನ ಜಾಲವೇ ಇದೆಯೆಂದು ಅಲ್ಲಿಯ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಪೋಲೀಸರು ಇದರಲ್ಲಿ ತುಂಬಾ ನಿಷ್ಕ್ರಿಯರಾಗಿದ್ದಾರೆಂಬುದು ನಮ್ಮ ಗಮನಕ್ಕೆ ಬಂದ ಕಾರಣ ಈ ಒಂದು ದೇಶದ್ರೋಹಿ ಘಟನೆ, ಇಂತಹ ದೊಡ್ಡ ವಿಚಾರಗಳ ಬಗ್ಗೆ ಹಾಗೂ ಇದು ಅಂತರ್ ರಾಜ್ಯಕ್ಕೆ ಸಂಬಂಧಪಟ್ಟ ಕಾರಣ ಇದನ್ನು ತಕ್ಷಣ ಸಿ.ಬಿ.ಐನವರು ತನಿಖೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ರಾಜ್ಯ ಮಟ್ಟದಲ್ಲಿರುವಂತಹ ರಾಜಕೀಯ ವ್ಯಕ್ತಿಗಳು ಇದರಲ್ಲಿ

ಶಾಮಿಲಾಗಿರುವರು ಎಂದು ತಿಳಿದು ಬಂದಿರುವುದರಿಂದ, ಹೇಳಿಕೆಗಳು ಪರೋಕ್ಷವಾಗಿ ಅಲ್ಲಿನ ಲೋಕಲ್ ಪತ್ರಿಕೆಗಳಲ್ಲಿ ಬಂದಿರುವ ಕಾರಣ ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು. ಕೇಂದ್ರ ಸರ್ಕಾರ ಈ ತನಿಖೆಯನ್ನು ನಡೆಸಿಕೊಡುವ ವ್ಯವಸ್ಥೆ ಮಾಡಬೇಕು. ರಾಜ್ಯದಲ್ಲಿ ಇನ್ನು ಮುಂದೆ ಇಂತಹ ಜಾಲಗಳು ನಡೆಯದ ಹಾಗೆ ದೊಡ್ಡ ವ್ಯವಸ್ಥೆಗಳನ್ನು ಮಾಡಬೇಕು. ಏಕೆಂದರೆ, ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆ ಭೂಗತ ದೊರೆಗಳ ಕೇಂದ್ರ ಎಂದು ಗೃಹ ಮಂತ್ರಿಗಳು ಈಗಾಗಲೇ ಅಲ್ಲಿನ ಅಧಿಕಾರಿಗಳನ್ನು ಭೇಟಿ ಮಾಡಿ ಹೇಳಿದ್ದಾರೆ. ಆದ್ದರಿಂದ ಸರ್ಕಾರ ಇದನ್ನು ಸಿಬಿಐಗೆ ಹಸ್ತಾಂತರ ಮಾಡಿ ಇದನ್ನು ದೊಡ್ಡ ರೀತಿಯಲ್ಲಿ ತನಿಖೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

+ ಶ್ರೀ ಆರ್. ರೋಷನ್‌ಬೇಗ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ 30ನೇ ತಾರೀಖು ಪುತ್ತೂರು ಪೋಲೀಸ್ ಸ್ಟೇಷನ್‌ಗೆ ಒಂದು ದೂರು ಬರುತ್ತದೆ. ಸೂಪರ್ ಲಾಡ್ಜ್ ಪುತ್ತೂರಿನಲ್ಲಿ ಅಬ್ದುಲ್‌ಲತೀಫ್ ಮ್ಯಾನೇಜರ್, ಪದ್ಮನಾಭನ್ ಎನ್ನುವವರು ಸ್ವಾಗತಕಾರರು, ಸೂಪರ್ ಲಾಡ್ಜ್ ಅವರ ಜೊತೆಗೆ ಒಬ್ಬ ಅಬ್ದುಲ್ ಬಷೀರ್ ಅಂತ ಈ ಫೋಟಾ ನೋಟುಗಳನ್ನು ಸರ್ಕ್ಯೂಲೇಟ್ ಮಾಡುತ್ತಾ ಇರುತ್ತಾರೆ. ಪೋಲೀಸಿನವರು ಹೋದ ಕೂಡಲೇ ಅಪರಾಧಿ ನಂಬರ್ (1) ಅಬ್ದುಲ್ ಲತೀಫ್ ಅಲ್ಲಿಂದ ಓಡಿ ಹೋಗುತ್ತಾರೆ. ಈ ಪದ್ಮನಾಭನ್ ಮತ್ತು ಅಬ್ದುಲ್ ಬಷೀರ್ ಅವರನ್ನು ಪೋಲೀಸಿನವರು ಅರೆಸ್ಟ್ ಮಾಡಿದಾಗ ಅವರ ಹತ್ತಿರ 100 ರೂಪಾಯಿ ಮುಖದ 23 ನೋಟ್‌ಗಳನ್ನು ಸೀಜ್ ಮಾಡಿದ್ದಾರೆ. ಪೋಲೀಸ್ ಸ್ಟೇಶನ್ ಪುತ್ತೂರು ಪಿ.ಎಸ್.ಐ ಅವರು ಕ್ರೈಮ್ ನಂಬರ್ 105:97 ಸೆಕ್ಷನ್ 498(ಬಿ)(ಸಿ) ಆಫ್ ದಿ ಐ ಪಿ ಸಿ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಈಗ ಅದರ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಯಾರನ್ನು ಅರೆಸ್ಟ ಮಾಡಿದ್ದರೋ ಅವರನ್ನು ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್‌ರವರ ಮುಂದೆ ಪ್ರೊಡ್ಯೂಸ್ ಮಾಡಿ, ಅವರನ್ನು ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಲಾಗಿದೆ. ಆಮೇಲೆ ಈ ಕೇಸ್‌ನ್ನು ಸಿ.ಓ.ಡಿ. ಯವರಿಗೆ ಒಪ್ಪಿಸಲಾಗಿದೆ. ಈ ಬಗ್ಗೆ ಅವರು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಮಾತನಾಡುತ್ತಾ ರಾಜಕಾರಣಿಗಳ ಕೈವಾಡ ಇದೆ ಎಂದು ಹೇಳುತ್ತಿದ್ದಾರೆ ಅವರು ಆ ಬಗ್ಗೆ ಏನಾದರೂ ಡಿಟೈಲ್ಸ್ ಇದ್ದು ನನ್ನ ಹತ್ತಿರ ಕೊಟ್ಟರೆ ಅದು ನಮಗೆ ಇನ್‌ವೆಸ್ಟಿಗೇಶನ್ ಮಾಡಲು ಸಹಾಯವಾಗುತ್ತದೆ.

ಪುದು, ಮಂಗಳೂರು ತಾಲ್ಲೂಕಿನ ಸೋಮೇಶ್ವರ, ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ ಅಧಿಸೂಚಿತ ಪ್ರದೇಶಗಳೆಂದು ಘೋಷಣೆಯಾಗಿರುವುದರಿಂದ ಅಲ್ಲಿಯ ಕಾಮಗಾರಿಗಳಿಗೆ ಅನುದಾನ

ಶ್ರೀ ವಿ. ರುಕ್ಕಯ್ಯ ಪೂಜಾರಿ : ಅಧ್ಯಕ್ಷರೆ, ನಮ್ಮ ಜಿಲ್ಲೆಯ ಬಂಟ್ವಾಳದ ಪುದು, ಮಂಗಳೂರು ತಾಲ್ಲೂಕಿನ ಸೋಮೇಶ್ವರ ಮತ್ತು ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ, ಇದು ಅಧಿಸೂಚಿತ ಪ್ರದೇಶ ಅಂತ ಘೋಷಣೆ ಆಗಿದೆ. ಅದನ್ನು ಈಗ ನಗರ ಪಂಚಾಯಿತಿ ಎಂದು ಮಾಡಿದ್ದಾರೆಂದು ಸಹ ತಿಳಿದು ಬಂದಿದೆ. ಇದುವರೆಗೂ ಅಲ್ಲಿ ಚುನಾವಣೆ ನಡೆಯದೇ ಅಲ್ಲಿನ ಜನರಿಗೆ ಯಾವುದೇ ಸವಲತ್ತುಗಳು